**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.603/2023**

**CW -5 PW-2**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ರಂಗನಾಥ |
| ತಂದೆ | ಃ | ದಂಡಪ್ಪ |
| ವಯಸ್ಸು | ಃ | 33 |
| ಉದ್ಯೋಗ | ಃ | ಪಿ.ಸಿ |
| ವಾಸಸ್ಥಳ | ಃ | ಗಬ್ಬೂರು |
| ಪ್ರಮಾಣಿಕರಿಸಿದ ದಿನಾಂಕ | ಃ | **24-04-2026** |

---

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ನಾನು 2019 ರಿಂದ ಇಲ್ಲಿವರೆಗೆ ಪಿ.ಸಿ ಎಂದು ಗಬ್ಬೂರು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 09.04.2023 ರಂದು ಮಧ್ಯಾಹ್ನ 03:00 ಗಂಟೆಗೆ ನಾನು ಮತ್ತು ಹೆಚ್ಸಿ 168 ಠಾಣೆಯಲ್ಲಿ ಇದ್ದಾಗ ಪಿ.ಎಸ್.ಐ ಇವರು ರಾಮದುರ್ಗ ಗ್ರಾಮದ ಸಾರ್ವಜನಿಕ ಸ್ಥಳದಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಖಚಿತ ಬಾತ್ಮಿ ಬಂದ ವಿಷಯವನ್ನು ತಿಳಿಸಿ ದಾಳಿ ಕುರಿತು ಹೇಳಿದ್ದು ತಕ್ಷಣ ಪಂಚರನ್ನು ಬರ ಮಾಡಿಕೊಂಡು ನಾವು ಎಲ್ಲರೂ ಠಾಣ ವಾಹನದಲ್ಲಿ ಮಧ್ಯಾಹ್ನ 03.15 ಗಂಟೆಗೆ ಠಾಣೆಯಿಂದ ಹೊರಟು ರಾಮದುರ್ಗ ಬಸ್ ನಿಲ್ದಾಣದ ಹತ್ತಿರ ವಾಹನವನ್ನು ಮರೆಯಲ್ಲಿ ನಿಲ್ಲಿಸಿ ಸ್ವಲ್ಪ ದೂರ ನಡೆದುಕೊಂಡು ಹೋಗಿ ಮರೆಯಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ತನ್ನ ಡಬ್ಬ ಅಂಗಡಿ ಮುಂದೆ ಮಧ್ಯವನ್ನು ಚೀಲದಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದು ಜನರು ಖರೀದಿ ಮಾಡುತ್ತಿದ್ದರು. ತಕ್ಷಣ ಮಧ್ಯಾಹ್ನ 03.45 ಗಂಟೆಗೆ ದಾಳಿ ಮಾಡಿದ್ದು ಖರೀದಿ ಮಾಡಲು ಬಂದ ಜನ ಓಡಿ ಹೋಗಿದ್ದು ಮಾರಾಟ ಮಾಡುತ್ತಿದ್ದ ವ್ಯಕ್ತಿ ಸಿಕ್ಕಿ ಬಿದ್ದಿದ್ದು ಆತನನ್ನು ವಿಚಾರಿಸಿದಾಗ ಹೆಸರು ಯಮುನಯ್ಯ ತಂದೆ ಭೀಮಯ್ಯ ಎಂದು ತಿಳಿಸಿದ್ದು ನಂತರ ವಿಚಾರಿಸಿದಾಗ ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ಹೇಳಿರುತ್ತಾನೆ. ನಂತರ ಪಂಚರ ಸಮಕ್ಷಮ ಚೀಲವನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ 180 ಎಂ.ಎಲ್ ಬಿ.ಪಿ ಡಿಲಕ್ಸ ವಿಸ್ಕಿ 8 ಪೌಚುಗಳು, 180 ಎಂ.ಎಲ್ ಒ.ಟಿ ವಿಸ್ಕಿ 4 ಪೌಚುಗಳು, 90 ಎಂ.ಎಲ್ ಒ.ಸಿ ಡಿಲಕ್ಸ ವಿಸ್ಕಿ 32 ಪೌಚುಗಳು ಇದ್ದು ಅವುಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ರಾಸಾಯನಿಕ ಪರೀಕ್ಷೆಗೆ

ಪ್ರತ್ಯೇಕಾಗಿ ತಲಾ ಒಂದು ಪೌಚನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಪಿಆರ್.ಒ ಎಂದು ಸೀಲ್ ಮಾಡಲಾಗಿರುತ್ತದೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 03.45 ರಿದ 04.45 ಗಂಟೆ ವರೆಗೆ ಮಾಡಿರುತ್ತೇವೆ. ನಂತರ ಪಂಚನಾಮೆ, ಮುಮಾ, ಆರೋಪಿ ಹಾಗೂ ಜ್ಞಾಪನ ಪತ್ರದೊಂದಿಗೆ ಠಾಣೆಗೆ ಚಾಸಾ-1 ರವರು ಹಾಜರಾಗಿ ಪ್ರಕರಣ ದಾಖಲು ಮಾಡುವಂತೆ ಠಾಣಾಧಿಕಾರಿಗೆ ನಿರ್ದೇಶನ ನೀಡಿರುತ್ತಾರೆ. ಅ ಕುರಿತು ನಾನು ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲು:-</u> ಆರೋಪಿ ಪರ ಶ್ರೀ. ಜಿ.ಪಿ ವಕೀಲರಿಂದ.**

ಸ್ಥಳಕ್ಕೆ ಹೋದಾಗ ಮಧ್ಯಾಹ್ನ 03.45 ಗಂಟೆ ಆಗಿತ್ತು. ಅಲ್ಲಿ ಅಂದಾಜು 7-8 ಜನ ಇದ್ದರು. ಅಂಗಡಿ ಮುಂದೆ ಆರೋೇಪಿ ಮಧ್ಯ ಮಾರಾಟ ಮಾಡುತ್ತಿದ್ದ. ಆರೋಪಿ ಪ್ಲಾಸ್ಟಿಕ್ ಚೀಲದಲ್ಲಿ ಮಧ್ಯವನ್ನು ಇಟ್ಟುಕೊಂಡಿದ್ದ. ಪ್ಲಾಸ್ಟಿಕ ಚೀಲದ ಬಣ್ಣ ನೆನಪಿಲ್ಲ. ಚೀಲವನ್ನು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡಿರುತ್ತೇವೆ. ರಾಮದುರ್ಗ ಕ್ರಾಸನಿಂದ ರಾಮದುರ್ಗಕ್ಕೆ ಹೋಗಲು ಕಚ್ಚಾ ರಸ್ತೆ ಇದೆ. ಕ್ರಾಸನಿಂದ ರಾಮದುರ್ಗಕ್ಕೆ ಹೋಗಲು ಕನಿಷ್ಟ 40 ನಿಮೀಷ ಬೇಕಾಗುತ್ತದೆ ಎಂದರೆ ಸರಿಯಲ್ಲ. ಘಟನ ಸ್ಥಳದ ಸುತ್ತಮುತ್ತ ಹೋಟಲ ಮತ್ತ ಅಂಗಡಿ ಇದೆ ಎಂದರೆ ಸರಿ. ಘಟನ ಸ್ಥಳದ ಸುತ್ತಮುತ್ತ ಸಾಕಷ್ಟು ಜನ ಇರುತ್ತಾರೆ. ಜಪ್ತಿ ಮಾಡಿಕೊಂಡ ಮಧ್ಯ ಸಾಮಾನ್ಯವಾಗಿ ಪರವಾನಿಗೆ ಪಡೆದ ಮಧ್ಯದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಮೇಲಾಧಿಕಾರಿಗಳ ಮಾತು ಕೇಳಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳುಳ ಇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.603/2023**

**CW -1 PW-1**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಪ್ರಕಾಶ ಸಿ |
| ತಂದೆ | ಃ | ಗೋವಿಂದಪ್ಪ |
| ವಯಸ್ಸು | ಃ | 40 |
| ಉದ್ಯೋಗ | ಃ | ಪಿ.ಎಸ್.ಐ |
| ವಾಸಸ್ಥಳ | ಃ | ಕೂಡ್ಲಿಗಿ |
| ಪ್ರಮಾಣೀಕರಿಸಿದ ದಿನಾಂಕ | ಃ | **24-04-2026** |

---

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ನಾನು ದಿನಾಂಕ 12.02.2023 ರಿಂದ ದಿಾಂಕ 16.06.2023 ವರೆಗೆ ಪಿ.ಎಸ್.ಐ ಎಂದು ಗಬ್ಬೂರು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 09.04.2023 ರಂದು ಮಧ್ಯಾಹ್ನ 03:00 ಗಂಟೆಗೆ ಠಾಣೆಯಲ್ಲಿ ಇದ್ದಾಗ ರಾಮದುರ್ಗ ಗ್ರಾಮದ ಸಾರ್ವಜನಿಕ ಸ್ಥಳದಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಖಚಿತ ಬಾತ್ಮಿ ಮೇರೆಗೆ ತಕ್ಷಣ ಪಂಚರನ್ನು ಬರ ಮಾಡಿಕೊಂಡು ನಮ್ಮ ಸಿಬ್ಬಂದಿ ಜೊತೆ ಠಾಣ ವಾಹನದಲ್ಲಿ ಮಧ್ಯಾಹ್ನ 03.15 ಗಂಟೆಗೆ ಠಾಣೆಯಿಂದ ಹೊರಟು ರಾಮದುರ್ಗ ಬಸ್ ನಿಲ್ದಾಣದ ಹತ್ತಿರ ವಾಹನವನ್ನು ಮರೆಯಲ್ಲಿ ನಿಲ್ಲಿಸಿ ಸ್ವಲ್ಪ ದೂರ ನಡೆದುಕೊಂಡು ಹೋಗಿ ಮರೆಯಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ತನ್ನ ಡಬ್ಬ ಅಂಗಡಿ ಮುಂದೆ ಮಧ್ಯವನ್ನು ಚೀಲದಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದು ಜನರು ಖರೀದಿ ಮಾಡುತ್ತಿದ್ದರು. ತಕ್ಷಣ ಮಧ್ಯಾಹ್ನ 03.45 ಗಂಟೆಗೆ ದಾಳಿ ಮಾಡಿದ್ದು ಖರೀದಿ ಮಾಡಲು ಬಂದ ಜನ ಓಡಿ ಹೋಗಿದ್ದು ಮಾರಾಟ ಮಾಡುತ್ತಿದ್ದ ವ್ಯಕ್ತಿ ಸಿಕ್ಕಿ ಬಿದ್ದಿದ್ದು ಆತನನ್ನು ವಿಚಾರಿಸಿದಾಗ ಹೆಸರು ಯಮುನಯ್ಯ ತಂದೆ ಭೀಮಯ್ಯ ಎಂದು ತಿಳಿಸಿದ್ದು ನಂತರ ವಿಚಾರಿಸಿದಾಗ ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ಹೇಳಿರುತ್ತಾನೆ. ನಂತರ ಪಂಚರ ಸಮಕ್ಷಮ ಚೀಲವನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ 180 ಎಂ.ಎಲ್ ಬಿ.ಪಿ ಡಿಲಕ್ಸ ವಿಸ್ಕಿ 8 ಪೌಚುಗಳು, 180 ಎಂ.ಎಲ್ ಒ.ಟಿ ವಿಸ್ಕಿ 4 ಪೌಚುಗಳು, 90 ಎಂ.ಎಲ್ ಒ.ಸಿ ಡಿಲಕ್ಸ ವಿಸ್ಕಿ 32 ಪೌಚುಗಳು ಇದ್ದು ಅವುಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ರಾಸಾಯನಿಕ ಪರೀಕ್ಷೆಗೆ ಪ್ರತ್ಯೇಕಾಗಿ ತಲಾ ಒಂದು ಪೌಚನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಪಿಆರ್.ಓ ಎಂದು ಸೀಲ್ ಮಾಡಲಾಗಿರುತ್ತದೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 03.45 ರಿದ 04.45 ಗಂಟೆ ವರೆಗೆ ಮಾಡಿರುತ್ತೇವೆ. ನಂತರ

ಪಂಚನಾಮೆ, ಮುಮಾ, ಆರೋಪಿ ಹಾಗೂ ಜ್ಞಾಪನ ಪತ್ರದೊಂದಿಗೆ ಠಾಣೆಗೆ ಹಾಜರಾಗಿ ಪ್ರಕರಣ ದಾಖಲು ಮಾಡುವಂತೆ ಠಾಣಾಧಿಕಾರಿಗೆ ನಿರ್ದೇಶನ ನೀಡಿರುತ್ತೇನೆ.

ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಹಿಯನ್ನು ನಿಪಿ-1 ಎ ಎಂದು, ಜ್ಞಾಪನ ಪತ್ರವನ್ನು ನಿಪಿ-2 ಎಂದು ಸಹಿಯನ್ನು ನಿಪಿ-2 ಎ ಎಂದು, ನ್ಯಾಯಾಲಯದ ಮುಂದೆ ಇರುವ 3 ಖಾಲಿ ಪೌಚುಗಳನ್ನು ಮುಮಾ-1 ರಿಂದ 3 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು:-</u> ಆರೋಪಿ ಪರ ಶ್ರೀ. ಜಿ.ಪಿ ವಕೀಲರಿಂದ.**

ದಾಳಿಗೆ ಪಂಚರನ್ನು ಒಳಗೊಂಡು ನಾವು 6 ಜನ ದಾಳಿ ಪರಿಕರಗಳೊಂದಿಗೆ ಹೋಗಿರುತ್ತೇವೆ. ಲ್ಯಾಪಟಾಪ್, ಕ್ಯಾಂಡಲ್, ಸೀಲ್, ಬಿಳಿ ಬಟ್ಟೆ, ದಾರ ಇವುಗಳನ್ನು ತೆಗೆದುಕೊಂಡು ಹೋಗಿರುತ್ತೇವೆ. ಪಂಚರನ್ನು ನಾನು ವಿಚಾರಣೆ ಮಾಡಿರುತ್ತೇನೆ. ಪಂಚರು ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ಠಾಣೆಯಿಂದ ಹೋದಾಗ ಮಧ್ಯಾಹ್ನ 03.15 ಗಂಟೆ ಆಗಿತ್ತು. ರಾಮದುರ್ಗ ಕ್ರಾಸನಿಂದ ರಾಮದುರ್ಗ ಗ್ರಾಮ 2 ಕಿ.ಮೀ ಅಂತರ ಇದೆ ಎಂದರೆ ಸಾಕ್ಷಿ 3-4 ಕಿ.ಮೀ ಅಂತರ ಇದೆ ಎಂದು ನುಡಿಯುತ್ತಾರೆ. ಸದರಿ ಕ್ರಾಸನಿಂದ ರಾಮದುರ್ಗ ಗ್ರಾಮದ ರಸ್ತೆ ಕಚ್ಚಾ ರಸ್ತೆ ಆಗಿರುತ್ತದೆ ಎಂದರೆ ಸರಿ. ಸದರಿ ಕ್ರಾಸನಿಂದ ರಾಮದುರ್ಗ ಗ್ರಾಮಕ್ಕೆ ಹೋಗಲು ಕನಿಷ್ಟ 45 ನಿಮೀಷ ಬೇಕಾಗುತ್ತದೆ ಎಂದರೆ ಸರಿಯಲ್ಲ. ಘಟನ ಸ್ಥಳದ ಅಕ್ಕ-ಪಕ್ಕ ಹೊಟೇಲ್ ಮತ್ತು ಅಂಗಡಿ ಇವೆ ಎಂದರೆ ಸರಿ. ಘಟನ ಸ್ಥಳದ ಸುತ್ತಮುತ್ತ ಸಾಕಷ್ಟು ಜನರು ಇರುತ್ತಾರೆ ಎಂದರೆ ಸರಿ. ದಾಳಿ ಸಮಯದಲ್ಲಿ ಜನರ ಹೇಳಿಕೆ ಪಡೆದಿಲ್ಲ. ಪಂಚನಾಮೆಯನ್ನು ಬೆರಳಚ್ಚು ಮಾಡಲಾಗಿರುತ್ತದೆ. ಪೋರ್ಟೆಬಲ್ ಬ್ಯಾಟರಿ ಚಾರ್ಜ ಇರುವ ಪ್ರಿಂಟರನ್ನು ನಮ್ಮ ಜೊತೆ ತೆಗೆದುಕೊಂಡು ಹೋಗಿದ್ದು ಸ್ಥಳದಲ್ಲಿ ಪ್ರಿಂಟ್ ತೆಗೆದು ಪಂಚರ ಸಹಿ ಪಡೆದಿರುತ್ತೇನೆ. ಜಪ್ತಿ ಮಾಡಿಕೊಂಡ ಮಧ್ಯ ಸಾಮಾನ್ಯವಾಗಿ ಪರವಾನಿಗೆ ಪಡೆದ ಮಧ್ಯದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಮೇಲಾಧಿಕಾರಿಗಳ ಮಾತು ಕೇಳಿ ಠಾಣ ಅಂಕಿ ಸಂಖ್ಯೆಗಳ ಸಲುವಾಗಿ ಆರೋಪಿ ವಿರುದ್ದ ಸುಳ್ಳ ಪ್ರಕರಣ ದಾಖಲು ಮಾಡಿರುತ್ತೇನ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳುಳ ಇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.